ಶ್ರೀ ಕೋದಂಡರಾಮೋ ವಿಜಯತೆ

# ಶ್ರೀ ಕೋದಂಡರಾಮ ಪ್ರತಿಷ್ಠಾಪನಾಶತಮಾನೋತ್ಸವ

**(30.04.2016 ರಿಂದ 09.05.2016ರ ವರೆಗೆ)**



## CENTENARY CELEBRATION OF PRATISHTHA OF SRI SITA LAKSHMANA HANUMAT SAMETHA SRI RAMACHANDRA DEVARU

SRI RAMAMANDIRA, SRI RAGHUPREMA TEERTHARA BRUNDAVANA SANNIDHI,
VICTORIAPET, ADONI - 518301. KURNOOL DISTRICT. A.P

**30th April, 2016 to 9th May 2016**

॥ಶ್ರೀಪತಿರ್ಮಾನದೋ ನಃ॥

ಶ್ರೀಲಕ್ಷ್ಮೀ ನರಸಿಂಹ-ಶ್ರೀವೇಂಕಟೇಶ-ಶ್ರೀಹಯವದನಾತ್ಮಕ। ಶ್ರೀಕೋದಂಡರಾಮೋ ವಿಜಯತೇ॥

ಶ್ರೀಮುಖ್ಯಪ್ರಾಣೇಶೋ ವಿಜಯತೇ ।  ಶ್ರೀಗುರುರಾಜೋ ವಿಜಯತೇ ।

। ಶ್ರೀರಘುಪ್ರೇಮತೀರ್ಥಗುರುಭ್ಯೋ ನಮಃ ।

# ಶ್ರೀ ಕೋದಂಡರಾಮ ಪ್ರತಿಷ್ಠಾಪನಾಶತಮಾನೋತ್ಸವ

## (30.04.2016 ರಿಂದ 09.05.2016ರ ವರೆಗೆ)

**ಶ್ರೀಸೀತಾಲಕ್ಷ್ಮಣೋಪೇತಂ ಹನೂಮತ್ಸ್ತುತ್ಯವೈಭವಮ್।**
**ಶ್ರೀರಾಮಂ ಶ್ರೀರಘುಪ್ರೇಮತೀರ್ಥಸಂಸ್ಥಾಪಿತಂ ಭಜೇ॥**
**ಚಿಂತಾಮಣಿಂ ಸ್ವಭಕ್ತಾನಾಂ ಕಲ್ಪವೃಕ್ಷಂ ಚ ಕಾಮದಮ್।**
**ಸ್ವಾಮಿನಂ ತ್ವಾಂ ರಘುಪ್ರೇಮತೀರ್ಥಂ ವಂದೇ ಹ್ಯಭೀಷ್ಟದಮ್॥**

ಇತಿಹಾಸದ ಪುಟಗಳಲ್ಲಿ ಯಾದವಗಿರಿ ಎಂದೇ ಪ್ರಸಿದ್ಧವಾದ ಇಂದಿನ ಆದೋನಿ (ಆದವಾನಿ)ಯು ಯುಗಾಂತರದ ಪ್ರಸಿದ್ಧಿಯಿರುವ ಪಟ್ಟಣ. ತ್ರೇತಾ ಯುಗದಲ್ಲಿ ಶ್ರೀರಾಮದೇವರ ಪಾದಸ್ಪರ್ಶದಿಂದ ಪವಿತ್ರವಾದ ಸನ್ನಿಧಿ. ಒಂದೆಡೆ ಬೆಟ್ಟಗಳ ಎತ್ತರದ ಸಾನುಪ್ರದೇಶದಿಂದ ರಕ್ಷಿತವಾದದ್ದು. ಶ್ರೀ ವ್ಯಾಸರಾಜ ಗುರುಸಾರ್ವಭೌಮರಿಂದ ಪ್ರತಿಷ್ಠಾಪಿತ ಶ್ರೀಮಂಗರಾಯ (ಶ್ರೀ ಮುಖ್ಯಪ್ರಾಣ ದೇವರು) ದೇವರ ಹಿರಿದಾದ ಸನ್ನಿಧಿ. ಕುಠಾರ ರಾಮಲಿಂಗೇಶ್ವರನ ಸನ್ನಿಧಿಯಿಂದ ಅನೇಕ ಋಷಿಮುನಿಗಳ ತಪೋಭೂಮಿ. ಎತ್ತರದ ಗಿರಿಗಹ್ವರ ಮಧ್ಯ ಕಂಗೊಳಿಸುವ ಶ್ರೀ ರಣಮಂಡಲ ಪ್ರಾಣದೇವರ ಸನ್ನಿಧಿಯು ಏಕಾಂತ ಭಕ್ತರಿಗೆ ಆಕರ್ಷಣೀಯ ಪ್ರಶಸ್ತ ಸನ್ನಿಧಿಯಾಗಿದೆ. ಮಂತ್ರಾಲಯ ಪ್ರಭುಗಳು ಶ್ರೀರಾಘವೇಂದ್ರ ಗುರು ಸಾರ್ವಭೌಮರು ಅನುಗ್ರಹಿಸಿದ ನವಾಬ್ ಹಾಗ ದಿವಾನ್ ವೆಂಕಣ್ಣನ ಕಾರ್ಯಕ್ಷೇತ್ರ. ಪ್ರಕೃತ ಆದೋನಿಯು ಪ್ರಸಿದ್ಧ ತಾಲೂಕು ಕೇಂದ್ರ ಹಾಗು ನಿಬಿಡವ್ಯಾಪಾರ ಕೇಂದ್ರ. ದಕ್ಷಿಣೋತ್ತರ ಸಂಪರ್ಕ ಕೊಂಡಿಯಂತಿರುವ ರೈಲುಮಾರ್ಗ ಉಳ್ಳದ್ದು.

19 ಹಾಗು 20ನೇಯ ಶತಮಾನದವಧಿಯಲ್ಲಿ ಸಾಧಕರಶ್ರೇಣೀ ಗಣಧುರೀಣ, ಮುತ್ತಿಗಿವಂಶಾವತಂಸ, ಅಗಸ್ತ್ಯ ಗೋತ್ರ ಮುಕುಟಮಣಿ, ಶ್ರೀಮತ್ಪರಮಹಂಸವಂಶೋತ್ತಂಸ ಕೂಡ್ಲಿ ಶ್ರೀಮದಾರ್ಯಅಕ್ಷೋಭ್ಯ ತೀರ್ಥ ಪರಂಪರಾಧೀಶ ಶ್ರೀಶ್ರೀರಘುಪ್ರೇಮತೀರ್ಥರ ಸಾಧನ ಹಾಗು ಕಾರ್ಯಕ್ಷೇತ್ರ ಆದೋನಿ. ಪೂಜ್ಯರ ಪಾವನತಮ ಮೂಲವೃಂದಾವನ ಸನ್ನಿಧಿಯ ಪುಣ್ಯಸ್ಥಳ. ಪೂಜ್ಯ

ಶ್ರೀಗಳವರು ಸಂನ್ಯಾಸಧರ್ಮದ ಮರ್ಯಾದಾವರಿತ ಮಹಾನುಭಾವರು. ಈಷಣತ್ರಯವಿದೂರರಾದ ವಿರಕ್ತಿವಿಭೂಷಿತರು. **'ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ'** ಎನ್ನುವ ತತ್ವದ ಆಂತರ್ಯವರಿತ ಪ್ರತಿಮರು. ಮೂರು ಬಾರಿ ಸರ್ವಸ್ವದಾನ ಮಾಡಿ ಧನ್ಯರಾದ ಮಾನ್ಯರು. ನಿಜಗುರು ಪ್ರಾಪ್ತಿಗಾಗಿ ಭೂಮಂಡಲವನ್ನೆಲ್ಲ ಸುತ್ತಾಡಿದ ಸುರೋತ್ತಮರು. ಸರ್ವಜ್ಞಶಾಸ್ತ್ರದ ಸದಾಶಯ ಬಲ್ಲ ಸಾಧಕಶಿರೋಮಣಿಗಳು. ವಾಯುದೇವರಲ್ಲಿ ವಿಶೇಷ ಉಪಸತ್ತಿಗೈದು, ವರಾಜ್ಞೆಯಂತೆ ಜೀವನಪರಿಕ್ರಮ ರೂಪಿಸಿದ ರೂವಾರಿಗಳು. ಆಭಿಮಾನಿಕ ಪ್ರತಿಷ್ಠೆಯು ಸಾಧನ ಪ್ರತಿಬಂಧಕವೆಂದರಿತು ಪೀಠಾಧಿಪತ್ಯ ತ್ಯಾಗ ಮಾಡಿದ ಮೂರ್ಧನ್ಯರು. ನೂರಾರು ಅಧಿಕಾರಿಭಕ್ತರಿಗೆ ನಿಯತ ಸಾಧನಾಮೃತವನ್ನು ಪಾನಗೈಸಿದ ಪೂತಾತ್ಮರು. ಸಾವಿರಾರು ಭಕ್ತರಿಗೆ ಶ್ರೀಹರಿ-ವಾಯು-ಗುರುಗಳ ಅನುಗ್ರಹ ಸಂಪಾದಕಮಾರ್ಗ ತೋರಿದ ಸನ್ಮಾನ್ಯರು. ಮಂಗರಾಯ (ಶ್ರೀ ವಾಯು) ದೇವರ ಹಾಗು ಗುರುಗಳಾದ ಅರಳೀಕಟ್ಟಿ ಶ್ರೀನರಸಿಂಹಾಚಾರ್ಯರ ಆದೇಶದಂತೆ ಅನಿತರಉಪವಾಸಗೈದ ಗುರೊತ್ತಮರು. ಸಮೀಪದ ಬೆಟ್ಟದಲ್ಲಿ ನೆಲಸಿರುವ ದಿಟ್ಟ ಶ್ರೀರಣಮಂಡಲ ಪ್ರಾಣದೇವರ ಸನ್ನಿಧಿಯಲ್ಲಿ ಅನುಪಮ ತಪವಗೈದ ತಪೋ ನಿಧಿಗಳು. ಕಲಿಯುಗಕಾಮಧೇನು ಶ್ರೀರಾಘವೇಂದ್ರಗುರುಸಾರ್ವಭೌಮರ ಸನ್ನಿಧಾನ ಮಂತ್ರಾಲಯವನ್ನು ತಮ್ಮ ಸಾತ್ವಿಕ ಬದುಕಿನ ತಾತ್ವಿಕಸಾಧನದ ಸ್ಫೂರ್ತಿ ಕೇಂದ್ರವನ್ನಾಗಿ ಸ್ವೀಕರಿಸಿದವರು. ಶ್ರೀಗಳವರು ಜ್ಞಾನ-ಭಕ್ತಿ-ವೈರಾಗ್ಯಗಳ ಮೂರ್ತ ರೂಪ, ಅಸದೃಶಾನುಷ್ಠಾನ ನಿಷ್ಣಾತ. ಮಂತ್ರ ಪ್ರತಿಪಾದ್ಯ ಮಹಿಮಾಮನನಶೀಲ-ಮುನಿ, ಅನುಗ್ರಹಿಸುವ ಕಡುಕರುಣಿ ಹಾಗು ಸಕಲಸೋತ್ತಮಸನ್ನಿಧಿಗೆ ಶರಣು ಹೊಂದಿ ಅನುಗ್ರಹೀತ ಅನುಪಮ ಶರಣಶಿರೋಮಣಿ. ಪೂಜ್ಯ ಶ್ರೀಗಳವರು ಸಜ್ಜ ನೋದ್ಧಾರಗೈದಪರಿ ಅನೇಕವಿಧ ಇಂದಿಗೂ ವೃಂದಾವನಸನ್ನಿಧಿ ಸೇವಾಸಕ್ತರಿಗೆ ಕಾಮಧೇನು-ಚಿಂತಾಮಣಿ-ಕಲ್ಪವೃಕ್ಷ.

ಪೂಜ್ಯಶ್ರೀಗಳವರು ಶಕ 1838 ನಳನಾಮ ಸಂವತ್ಸರ ವೈಶಾಖ ಶುದ್ಧ ತೃತೀಯಾ (ಅಕ್ಷಯ ತೃತೀಯಾ) ಶುಕ್ರವಾರ ದಿನಾಂಕ: 05.05.1916 ರಂದು ಆದೋನಿಯಲ್ಲಿ ಎಡಪಾರ್ಶ್ವದಲ್ಲಿ ಸೀತಾಸಮೇತ ಶ್ರೀರಾಮಲಕ್ಷ್ಮಣ-ಹನುಮಂತ ದೇವರ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿದ್ದಾರೆ. ಅಂದಿನಿಂದ ಕ್ಲುಪ್ತ ಪೂಜಾ-ಉತ್ಸವಾದಿಗಳು ಯಥಾಸಾಂಗ ನಡೆದುಕೊಂಡು ಬರುತ್ತಿವೆ. ದೇವತಾ ಸನ್ನಿಧಾನ ಬಹುಜಾಗ್ರತ ವಾಗಿದೆ. ಪೂಜ್ಯ ಶ್ರೀರಘುಪ್ರೇಮತೀರ್ಥರ ತಪಸ್ಸಿನ ಫಲವಾಗಿ

ರೂಪಗೊಂಡಿರುವ ಈ ಸನ್ನಿಧಾನವು ನಿರ್ಮಾಣಗೊಂಡು ನೂರು ಸಂವತ್ಸರಗಳು ಸಂದಿವೆ. ಬರುವ ದುರ್ಮುಖ ಸಂವತ್ಸರದ ವೈಶಾಖ ಶುಕ್ಲತೃತೀಯಾ (ಅಕ್ಷಯ ತೃತೀಯಾ) 09.05.2016 ರಂದು ಪ್ರತಿಷ್ಠಾಪನೆಯಾಗಿ ಶತವರ್ಷಗಳು ಪೂರ್ಣ-ಗೊಳ್ಳುತ್ತವೆ. ತನ್ನಿಮಿತ್ತ ಪ್ರತಿಷ್ಠಾಪನಾ ಶತಮಾನೋತ್ಸವವನ್ನು ಸವೈಭವ ಆಚರಿಸಲು ಪೂಜ್ಯ ಶ್ರೀಗಳವರ ವಂಶೀಕರು ಹಾಗು ಇತರ ಭಕ್ತರನ್ನೊಳಗೊಂಡ ಉತ್ಸವ ಸಮಿತಿಯು ತೀರ್ಮಾನಿಸಿದೆ. ಶತಮಾನೋತ್ಸವವು 30.04.2016 ರಿಂದ 09.05.2016 ರ ವರೆಗೆ ನಡೆಯಲಿದೆ. **ಉತ್ಸವದ ಉದ್ಘಾಟನೆ** ಹಾಗು ನೂತನವಾಗಿ ನಿರ್ಮಿಸಿದ "**ಶ್ರೀ ಶ್ರೀ ರಘುಪ್ರೇಮತೀರ್ಥ ಆಧ್ಯಾತ್ಮಿಕ ಕೇಂದ್ರದ**" ಉದ್ಘಾಟನೆಯನ್ನೂ ಭಾವಿಸಮೀರ ಶ್ರೀ ವಾದಿರಾಜಗುರುಪೀಠಾಧಿ-ರೂಢ ಶ್ರೀ ಸೋದೆಮಠಾಧೀಶ **ಶ್ರೀ ಶ್ರೀ ವಿಶ್ವವಲ್ಲಭತೀರ್ಥ** ಶ್ರೀಪಾದಂಗಳವರು **30.04.2016** ರಂದು ನೆರವೇರಿಸಲಿದ್ದಾರೆ. ಈ ಉತ್ಸವದ ಅವಧಿಯಲ್ಲಿ ಜ್ಞಾನಸತ್ರವೇ ಮೊದಲಾದ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಶಾಸ್ತ್ರಗ್ರಂಥ ಪಾರಾಯಣ, ಹೋಮ-ಹವನ, ತಾರತಮ್ಯೋಕ್ತ ಭಜನೆ, ಹರಿದಾಸಗಾನಸುಧಾ, ವಿದ್ವಾಂಸರಿಂದ ಪ್ರವಚನ, ರಸಪ್ರಶ್ನೆ ಮೊದಲಾದವುಗಳೂ ಜರುಗಲಿವೆ. ಈ ಅವಧಿಯಲ್ಲಿ ಶ್ರೀ ಶ್ರೀಪಾದರಾಜ ಮಠಾಧೀಶರಾದ **ಶ್ರೀ ಶ್ರೀ ಕೇಶವನಿಧಿತೀರ್ಥ** ಶ್ರೀಪಾದಂಗಳವರು ಹಾಗು ಮಂತ್ರಾಲಯ ಮಠಾಧೀಶ ಶ್ರೀ ಶ್ರೀ ಸುಶಮೀಂದ್ರತೀರ್ಥ ಕರಕಂಜ ಸಂಜಾತ **ಶ್ರೀ ಶ್ರೀ ಸುವಿದ್ಯೇಂದ್ರತೀರ್ಥ** ಶ್ರೀಗಳವರೂ ಆಗಮಿಸಿ ವಿಶೇಷ ಅನುಗ್ರಹಿಸಲಿದ್ದಾರೆ. ವಿಶೇಷ ಸಂತರ್ಪಣಾದಿಗಳೂ ನಡೆಯಲಿವೆ. ಸಕಲ ಸದ್ಭಕ್ತರೂ ಅಪರೂಪದ ಈ ಅಪೂರ್ವ ಶತಮಾನೋತ್ಸವದಲ್ಲಿ ಸಕ್ರಿಯ ಪಾಲ್ಗೊಂಡು ಯಥಾಶಕ್ತಿ ಸೇವೆ ಸಲ್ಲಿಸುವ ಮೂಲಕ ಶ್ರೀಹರಿ-ವಾಯು-ಗುರುಗಳ ಅನುಗ್ರಹ ಭಾಜನರಾಗಬೇಕೆಂದು ಕೋರಲಾಗಿದೆ.

**ಶ್ರೀ ಮುತ್ತಿಗಿ ರಘು ಪ್ರೇಮಾಚಾರ್ಯರು ಹಾಗೂ ಸಹೋದರರು**
**(ಶ್ರೀಗಳವರ ಪೂರ್ವಾಶ್ರಮ ವಂಶಸ್ಥರು)**
**ಶ್ರೀ ರಘುಪ್ರೇಮ ತೀರ್ಥ ಸಕಲ ಶಿಷ್ಯ ವೃಂದ,**
**ಶತಮಾನೋತ್ಸವ ಸಮಿತಿ, ಆದೋನಿ.**

ದಿನಾಂಕ:

# CENTENARY CELEBRATION OF PRATISHTHA OF SRI SITA LAKSHMANA HANUMAT SAMETHA SRI RAMACHANDRA DEVARU

**SRI RAMA MANDIRA, SRI RAGHUPREMA TEERTHARA BRUNDAVANA SANNIDHANA, VICTORIAPET, ADONI - 518301. KURNOOL DISTRICT. A.P**

PROGRAMME CO-ORDINATOR

**Dr. SRI NIPPANI GURURAJACHAR, BALLARI**

## 30-04-2016 - Chaitra Bahula Ashtami (Saturday)

**8:00 AM** **VASTU HOMA AND NAVAGRAHA HOMA**

**4:00 PM** Arrival of His Holiness **Sri Sri 108 Sri Vishwavallabha Teertharu**
**Sri Bhavi Sameera Sode Vadiraja Mutt, Udupi**
**SHOBHA YATRE**



**5:00 PM** **SWAGATA BHASHANA**
**SRI RAGHUPREMATEERTHA ADHYATMIKA KENDRA UDGHATANE**
(Newly Constructed)
and **SHATHAMANOTSAVA UDGHATANE**
by **Sri Sri 108 Sri Vishwavallabha Teertharu**
Message by Sri Sode Swamiji

**6:00 - 7:00 PM** Pravachana by
Vidwan **Sri Pushkara Prasadachar,** Bengaluru

**7:00 PM** **Sri Bhootharajara Prasanna Pooje and Sayankala Pooje**

## 01-05-2016 - Chaitra Bahula Navami (Sunday)

**7:00 AM** **Samsthana Pooje - Sri Sode Vadiraja Mutt Swamiji**

**9:00 AM** **Samoohika Padapooje and Sanmana**
in Sri Rama Mandira Premises

| | |
|---|---|
| **10:00 AM** | Pravachana by<br>Vidwan Sri **Venkateshachar Kulkarni,** Udupi<br>**Anugraha Bhashana by Sode Swamiji** |
| **4:00 - 5:00 PM** | Dasavani by **Kumari Apeksha Appala,** Bengaluru (Sripadaputra Sri Raghurama Vitthalankita Sri Muthigi Swamirayacharyara Krutigalu) |
| **5:00 to 6:00 PM** | Pravachana by<br>Vidwan Sri **Venkateshachar Kulkarni,** Udupi |
| **6:00 to 7:00 PM** | Pravachana by<br>Vidwan Sri **Srivatsachar,** Bengaluru |
| **7:00 to 8:00 PM** | Pravachana by<br>Vidwan Sri **Atmakur Anandateerthachar** |
| **8:00 PM** | **Maha Mangalarathi** |

## 02-05-2016 - Chaitra Bahula Dashami (Monday)

| | |
|---|---|
| **8:00 TO 9:00 AM** | Pravachana by<br>Vidwan Sri **Nagendra Prasadachar,** Hyderabad Branch |
| **9:00 TO 10:00 AM** | Pravachana by<br>Vidwan Sri **Kurnool Srinivasachar,** Bengaluru |
| **10:00 TO 11:00 AM** | Pravachana by<br>Vidwan Sri **Srivastsachar,** Bengaluru.<br>followed by Naivedya, Hastodaka,<br>Maha Mangalarathi |
| **5:00 TO 6:00 PM** | Pravachana by<br>Vidwan Sri **Nagendra Prasadachar,** Hyderabad Branch |

**6:00 TO 7:00 PM** Pravachana by Vidwan Sri **Susvaram Nagarajachar,** Adoni followed by Maha Mangalarathi

## 03-05-2016 - Chaitra Bahula Ekadashi (Tuesday)

**8:00 TO 10:00 AM** Pravachana by Vidwan Sri **Kurnool Srinivasachar,** Bengaluru

**10.30 AM onwards** **Cultural Programmes (Rangoli and Devotional Songs Competetions)**

**6:00 TO 7:00 PM** Pravachana by Vidwan **Sri Gururaja Dasaru,** Bengaluru

**7:00 TO 9:00 PM** **Bhajana by Bhajana Mandali**

## 04-05-2016 - Chaitra Bahula Dwadashi (Wednesday)

**6:30 AM** **Naivedya, Hastodaka and Parani**

**9:30 TO 10:30 AM** Pravachana by Vidwan Sri **Kurnool Srinivasachar,** Bengaluru

**11.00 AM onwards** **Cultural Programmes (Stotra and Quiz Competetions)**



**4:00 PM** Arrival of His Holiness **Sri Sri 108 Sri Keshavanidhi Teertharu** of **Sripadaraja Mutt, Mulabagilu**

**5:00 PM** **Shobha Yatre, Swagata Bhashana**

| | |
|---|---|
| **6:00 PM TO 7:00PM** | Pravachana by<br>Vidwan Sri **Kurnool Srinivasachar,** Bengaluru |
| **7:00PM TO 8:00PM** | Pravachana by<br>Vidwan Sri **Ayachit Dheerendrachar,**<br>Bengaluru |
| **8:00 PM** | Sayankala Pooje by **Sri Sripadaraja Mutt Swamiji** |

## 05-05-2016 - Chaitra Bahula Trayodashi (Thursday)

| | |
|---|---|
| **8:00 TO 9:00 AM** | **Samoohika Padapooje,**<br>at **Srirama Mandira Premises** |
| **9:00 TO 10:00 AM** | Pravachana by<br>Vidwan Sri **Nippani Gururajachar,** Ballari |
| **10:00 TO 11:00 AM** | Pravachana by<br>Vidwan **Sri Kurnool Srinivasachar,**<br>Bengaluru |
| **11:00 AM** | **Release of Souvenir**<br>(Smarana Sanchike)<br>**Srigalavara Anugraha Bhashana** |
| **11:30 AM** | **Samsthana Mahapooje by**<br>**Sripadaraja Mutt Swamiji** |
| **5:00 TO 6:00 PM** | Pravachana by<br>Vidwan Sri **Bharathiramanachar,** Hubballi |
| **6:00 TO 7:00 PM** | Pravachana by<br>Vidwan Sri **Poornaprajnachar Ganachari,**<br>Bengaluru |
| **7:00 PM** | **Pallakki Seva, Mangalarathi** |

## 06-05-2016 - Chaitra Bahula Amavasya (Friday)

| | |
|---|---|
| **8:00 TO 9:00 AM** | Pravachana by Vidwan Sri **Bharathiramanachar,** Hubballi |
| **9:00 TO 10:00 AM** | Pravachana by Vidwan Sri **Poornaprajnachar Ganachari,** Bengaluru |
| **10:00 TO 11:00 AM** | Pravachana by Vidwan **Sri Trivikrama Prahladachar,** Adoni |
| **12:00 NOON** | **Naivedya, Hastodaka, Maha Mangalarathi** |
| **4:00 PM** | Arrival of His Holiness **Sri Sri 108 Sri Suvidyendra Teertharu,** Bengaluru **Shobha Yatre, Swagata Bhashana** |
| **5:00 TO 6:00 PM** | Pravachana by Vidwan **Sri Harinarayana Vitthala Dasaru,** Purandarashrma, Om nagar |
| **6:00 TO 7:00 PM** | **Pravachana by Swamiji** |
| **8:00 PM** | **Sayankala Pooje by Swamiji,** |



## 07-05-2016 - Vaishakha Shukla Pratipada (Saturday)

| | |
|---|---|
| **8:00 TO 9:00 AM** | Pravachana by Vidwan Sri **Sameeranachar,** Bengaluru |
| **9:00 TO 10:00 AM** | **Pravachana by Swamiji** |
| **10:00 TO 11:00 AM** | **Samoohika Padapooje** in Sri Rama Mandira Premises |

| | |
|---|---|
| **11:30 AM** | **Samsthana Maha Pooje** |
| **5:00 TO 6:00 PM** | Pravachana by<br>Vidwan Sri **Sameeranachar,** Bengaluru |
| **6:00 TO 7:00 PM** | **Pravachana by Swamiji** |
| **8:00 PM** | **Sayankala Pooje by Swamiji** |
| **10:00 PM** | Ballet by **Smt.Nikhil Joshi, on Dasarapadagalu,** Bengaluru |

## 08-05-2016 - Vaishakha Shukla Dvitiya (Sunday)

| | |
|---|---|
| **8:00 TO 9:00 AM** | Pravachana by<br>Vidwan Sri **Varaha Vitthala Dasaru,** Mandya. |
| **9:00 TO 10:00 AM** | Pravachana by<br>Vidwan Sri **Manakari Srinivasachar,** Ballari. |
| **10:00 TO 11:00 AM** | **Pravachana by Swamiji** |
| **11:00 TO 11:30 AM** | **Samoohika Padapooje**<br>in Sri Rama Mandira Premises |
| **11:30 AM** | **Samsthana Maha Pooje** |
| **5:00 TO 6:00 PM** | Pravachana by<br>Vidwan Sri **Manakari Srinivasachar,** Ballari. |
| **6:00 TO 7:00 PM** | **Dasavani programme by**<br>**Kumari Shruthi,** Kamavaram. |
| **7:00 TO 8:00 PM** | **Pravachana by Swamiji** |
| **8:00 PM** | **Sayankala Pooje by Swamiji** |

## 09-05-2016 - Vaishakha Shukla Akshaya Triteeya (Monday)
# AKSHYA TRITEEYA

| | |
|---|---|
| 7:00 TO 10:00 AM | **Abhyanjana to Sri Ramadevaru, Pavamana Homa, Abhisheka by Sri 108 Suvidyendra Teertharu, Gandhalepana to Sri Sri Raghuprema Teerthara Brundavana** |
| 10:00 AM | **Srigalavara Samaaropa Bhashana** Vandanarpane |
| 11:00 TO 11:30 AM | **Phala Mantrakshate, Parithoshaka and Nenapina Kanike Vitharane 6by Swamiji** |
| 11:30 AM | **Samsthana Maha Pooje** |
| 7:00PM | **Pallakki seva** |


**CONTACT DETAILS:**

| | | |
|---|---|---|
| Muthigi Raghupremachar, | Cell: | 0 879 062 0115 |
| Muthigi Madhusudanachar, | Cell: | 0 812 522 1388 |
| Muthigi Maruth, | Cell: | 0 949 310 4610 |

# SEVA LIST

| | |
|---|---|
| **Sampoorna Seva**<br>**(One day, including Anna Santharpane)** | ` 15,000/- |
| **Sarvaseva (One day)** | ` 3,000/- |
| **Anna Santarpane (One day)** | ` 2,000/- |
| **Hoovina Alankara**<br>**(One day, Sri Rama devarige and Sri Raghuprema Teerthara Brundavanakke)** | ` 1,000/- |
| **Hoovina Alanakara Samsthana Pooje**<br>**(One day - Morning and Evening)** | ` 1,000/- |
| **Hastodaka (One day - Sri Raghprema Teertha Brundavana)** | ` 200/- |
| **Swamigala Samsthana Pooje Including Biksha (One day)** | ` 2,500/- |
| **Sayankala Pooje (One day)** | ` 200/- |
| **Samoohika Padapooje at Sri Rama Mandira (One day)** | ` 500/- |
| **Vidvamsara Sambhavane (One day)** | ` 3,000/- |
| **Pavamana Homa (09.05.2016)** | ` 200/- |
| **Sri Bhootharajara Prasanna Bali Pooje**<br>**(30.04.2016 Evening by Sode Swamiji)** | ` 101/- |

Bank account details are provided hereunder for the devotees who wish to offer their generous contributions:
Cheques/DDs /MOs should be made in favour of **SHREE RAGHUPREMATHEERTHA TRUST,** C.A/c No. **37030100005374** (IFSC Code: **BARB0ADONIX** ) **BANK OF BARODA, ADONI Branch,** Kurnool Dist., A.P., India.